ಈ ಬಗ್ಗೆ ಎಷ್ಟು ಹಣವನ್ನು ವಸೂಲ್ಮಾಡಿದ್ದಾರೆ ? ಮತ್ತು ಎಷ್ಟು ಹಣವನ್ನು ವಿಜಾನೆಗೆ ತುಂಬಿದ್ದಾರೆ ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ರೈತ ಸಂಘದವರಿಗೆ ಇದನ್ನು ವಸೂಲ್ಮಾಡುವ ಅಧಿಕಾರ ನಾವೇನೂ ಕೊಟ್ಟಿಲ್ಲ ಮತ್ತು ಅವರು ವಸೂಲ್ಮಾಡಿರುವುದು ನಮ್ಮ ಗಮನಕ್ಕೂ ಬಂದಿಲ್ಲ. ಅವರೇನಾದರೂ ವಸೂಲ್ಮಾಡಿದ್ದರೆ ಯಾವುದಾದರೂ ಅಂತಹ ಪ್ರಕರಣಗಳು ಇದ್ದರೆ, ಸರ್ಕಾರದ ಅವಗಾಹನೆಗೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಧನಂಜಯ ಕುಮಾರ್.—ಹಿಂದೆ ಅವರು ಎಷ್ಟು ಸಂಗ್ರಹ ಮಾಡಿದ್ದಾರೆ ಅನ್ನುವುದಕ್ಕೆ ರೈತ ಸಂಘದವರ ಹತ್ತಿರ ಲೆಕ್ಕ ಇದೆ. ಅದನ್ನು ವಿಚಾರ ಮಾಡಬಹುದಲ್ಲ ?

ಉಪಾಧ್ಯಕ್ಷರು.—ಮಾನ್ಯ ಸಚಿವರು ಅದು ಸರ್ಕಾರದ ಗಮನಕ್ಕೆ ಬಂದಿಲ್ಲ, ಆ ತರಹ ಏನಾದರೂ ವಸೂಲ್ಮಾಡಿದಾರ್ದೆ ಎಂದು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರಲ್ಲ.

ಶ್ರೀ ವಿ. ಧನಂಜಯಕುಮಾರ್.—ಕನಕಪುರದಲ್ಲಿ ಈ ರೀತಿಯಾಗಿ ಅವರು 6 ಲಕ್ಷ ರೂಪಾಯಿಹಣ ವನ್ನುಸಂಗ್ರಹ ಮಾಡಿದ್ದಾರೆ ಎಂದು ಪತ್ರಿಕೆಯಲ್ಲೂ ಬಂದಿದೆ ಆದುದರಿಂದ ಇದರ ಬಗ್ಗೆ ಸರ್ಕಾರದಲ್ಲಿ ಲೆಕ್ಕ ಇರಬೇಕಲ್ಲ ?

ಶ್ರೀ ಪಿ. ರಾಮಚಂದ್ರ ರಾವ್.—ನಾನು ಹಿಂದೆ ಇದರ ಬಗ್ಗೆ ಚರ್ಚೆ ಮಾಡಿ ಈ ಸದನದಲ್ಲಿ ಅದರ ಚೆಕ್ ನಂಬರ್ ಸಹ ಕೊಟ್ಟಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಿಗೆ ಹೇಳಬೇಕಾದರೆ, ಈ ಹೊಸ ಸರ್ಕಾರ ಬರುವ ಮುನ್ನ ರೈತ ಸಂಘದವರು ಚಳುವಳಿ ಮಾಡಿದರು. ಆ ಹಳ್ಳಿಯಲ್ಲಿ ಏನು ಶಿಲೆಗಳನ್ನು ತೆಗೆದು ಕೊಂಡು ಹೋಗುತ್ತಾರೋ ಅದರಿಂದ ಬರತಕ್ಕಂಥಾ ದುಡ್ಡನ್ನು ನಮ್ಮ ಹಳ್ಳಿಯ ಅಭಿವೃದ್ಧಿಗೆ ಕೊಡ ಬೇಕೆಂದು ಚಳುವಳಿ ಮಾಡಿದರು. ಈ ಹೊಸ ಸರ್ಕಾರ ಬಂದ ಮೇಲೆ ಅವರಿಗೆ ಸ್ಪಷ್ಟವಾಗಿ ಹೇಳಿದ್ದೇವೆ ಏನೆಂದರೆ ಇದರ ಬಗ್ಗೆ ತಾವೇನಾದರೂ ವಸೂಲ್ಮಾಡುವುದಾದರೆ, ಅದು ನಮ್ಮ ಗಮನಕ್ಕೆ ಬಂದರೆ ಸೂಕ್ತ ಕ್ರಮತೆಗೆದುಕೊಳ್ಳುತ್ತೇವೆದು ಇನ್ನು ಮಾನ್ಯ ಸದಸ್ಯರು ಇದರ ಬಗ್ಗೆ ಬೇರೆ ಕಡೆ ಏನಾದರೂ ನಡೆದಿದ್ದರೆ, ವಿವರ ಕೊಟ್ಟರೆ ಸಾಕು, ಅದರ ಮೇಲೂ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಪ್ರಶ್ನೆ 718 (1630) ಶ್ರೀ ಎಂ. ವರದೇಗೌಡ.—ಸದಸ್ಯರು ಹಾಜರಿಲ್ಲ.
ಪ್ರಶ್ನೆ 719 (1621) ಶ್ರೀ ಎಂ. ಮಲ್ಲಪ್ಪ ಸದಸ್ಯರು ಹಾಜರಿಲ್ಲ.

ಪ್ರಶ್ನೆ 720 (1685) ಶ್ರೀ ಜಿ.ಎಸ್. ಬಾಗಲಕೋಟೆ.— ಉಪಾಧ್ಯಕ್ಷರೇ, ನಾನು ಎರಡು ಪ್ರಶ್ನೆ ಯನ್ನು ಕಳುಹಿಸಿದ್ದೆ. 1684 ಮತ್ತು 1685 ಎರಡು ಪ್ರಶ್ನೆ ಕೇಳಿದ್ದೇನೆ. ಇದರಲ್ಲಿ 1684ನೇ ಪ್ರಶ್ನೆಯ ಉತ್ತರದ ಪಟ್ಟಿ ನನ್ನ ಕೈಯಲ್ಲಿ ಇದೆ, ಆದರೆ ಈ ಪ್ರಶ್ನೆಯ ಪಟ್ಟಿಯಲ್ಲಿ ಅದು ಪ್ರಿಂಟ್ ಆಗಿಲ್ಲ. ಈ ಪ್ರಶ್ನೆಯಲ್ಲಿ 1685 ಮಾತ್ರ ಪ್ರಿಂಟ್ ಆಗಿದೆ. ನಾನು ಎರಡೂ ಪ್ರಶ್ನೆಯನ್ನು ಕೇಳ ಬಯಸುತ್ತೇನೆ.

ಶ್ರೀ ಎಂ. ರಘುಪತಿ (ವಾರ್ತಾ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ, ಮೊದಲನೇ ಪ್ರಶ್ನೆ ಯಾವುದು ಎನ್ನುವುದು ನನಗೆ ಗೊತ್ತಿಲ್ಲ. ಆದುದರಿಂದ ನಾನು 720 (1685) ಈ ಪ್ರಶ್ನೆಗೆ ಮಾತ್ರ ಉತ್ತರ ಕೊಡಲು ಬಯಸುತ್ತೇನೆ. ಉತ್ತರ ಈ ರೀತಿ ಇದೆ.—

(ಉತ್ತರವನ್ನು ಲಗತ್ತಿಸಲಾಗಿದೆ)

ವಿಷಯ : ಬಿಜಾಪುರ ಜಿಲ್ಲೆಯಲ್ಲಿರುವ ಪ್ರೇಕ್ಷಣೆಯ ಸ್ಥಳಗಳು

ಪ್ರಶ್ನೆ ಸಂಖ್ಯೆ 720 (1685) ಶ್ರೀ ಗು.ಶಿ. ಬಾಗಲಕೋಟೆ (ಜಮಖಂಡಿ).—ಮಾನ್ಯ ಪ್ರಚಾರ, ವಾರ್ತಾ, ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಬಿಜಾಪುರ ಜಿಲ್ಲೆಯಲ್ಲಿರುವ ಪ್ರವಾಸೋದ್ಯಮ ಸ್ಥಳಗಳು ಯಾವುವು ಮತ್ತು ಪ್ರವಾಸೋ ದ್ಯಮ ಸಂಸ್ಥೆಯವರು ಎಷ್ಟು ಕಡೆಗಳಲ್ಲಿ ತಮ್ಮ ಕಛೇರಿಗಳನ್ನು ಸ್ಥಾಪಿಸಿದ್ದಾರೆ ;

ಆ) ಮೇಲ್ಕಂಡ ಕಛೇರಿಗಳ ಪೈಕಿ ಅನೇಕ ಕಛೇರಿಗಳಲ್ಲಿ ಕೆಲಸ ನಿರ್ವಹಣೆ ಸಮರ್ಪಕವಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ರಘುಪತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಬಿಜಾಪುರ ಜಿಲ್ಲೆಯಲ್ಲಿ 10 ಪ್ರವಾಸಿ ಕೇಂದ್ರಗಳನ್ನು ಗುರುತಿಸಲಾಗಿದೆ. ಒಂದು ಪ್ರವಾಸಿ ಕಛೇರಿಯನ್ನು ಬಿಜಾಪುರದಲ್ಲಿ ತೆರೆಯಲಾಗಿದೆ.

ಆ) ಇಲ್ಲ.

ಶ್ರೀ ಜಿ.ಎಸ್. ಬಾಗಲಕೋಟೆ.—ಮಾನ್ಯ ಉಪಾಧ್ಯಕ್ಷರೇ, ಬಿಜಾಪುರ ಜಿಲ್ಲೆ ಎನ್ನುವುದು ಒಂದು ಪ್ರಸಿದ್ಧವಾದ ಐತಿಹಾಸಿಕವಾದ ಕೇಂದ್ರ. ಇದರಲ್ಲಿ ಜಗತ್ಪ್ರಸಿದ್ಧವಾದ ಗೋಳಗುಮ್ಮಟ ಇದೆ. ಜಗತ್ತಿನ 7 ಸ್ಥಳಗಳಲ್ಲಿ ಇದು ಒಂಮ ಮಹತ್ವವಾದ ಸ್ಥಾನವನ್ನು ಪಡೆದಿದೆ. ಅಷ್ಟೇ ಅಲ್ಲ ಇದು ಚಾಲುಕ್ಯರ ಕಾಲದ ಒಂದು ಐತಿಹಾಸಿಕವಾದ ಸ್ಥಳವೂ ಆಗಿದೆ. ಆದರೆ ದುರ್ದೈವದಿಂದ ಈ ಪ್ರವಾಸಿ ಕೇಂದ್ರದಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಬಿಜಾಪುರದಲ್ಲಿ ಈ ಬಗ್ಗೆ ಒಂದು ಆಫೀಸ್ ಇದ್ದರೂ ಕೂಡ ಸರಿಯಾಗಿ ನೋಡಿಕೊಳ್ಳುವಂಥಾ ಒಂದು ವ್ಯವಸ್ಥೆ ಇಲ್ಲ. ಆದುದರಿಂದ ಮಾನ್ಯ ಸಚಿವರು ಈ ಬಗ್ಗೆ ತೀವ್ರ ಗಮನಕೊಟ್ಟು ಈ ಪ್ರವಾಸಿ ಕೇಂದ್ರವನ್ನು ಚೆನ್ನಾಗಿ ಬೆಳೆಸುವ ಹಾಗೆ ಅಲ್ಲಿಗೆ ಸಾಕಷ್ಟು ಅನುಕೂಲಗಳನ್ನು ಒದಗಿಸಿ ಕೊಡಬೇಕು ಎಂದು ಹೇಳುತ್ತೇನೆ.

ಎರಡನೆಯದಾಗಿ ಈ ಬಿಜಾಪುರ ಜಿಲ್ಲೆಗೆ ಒಂದು ವಿಮಾನ ನಿಲ್ದಾಣವನ್ನು ಕಲ್ಪಿಸುವ ಸಲುವಾಗಿ ಕೇಂದ್ರ ಸರ್ಕಾರದ ಜೊತೆಗೆ ಮಾನ್ಯ ಸಚಿವರು ಮಾತನಾಡಿ ಈ ಕಾರ್ಯಕ್ರಮವನ್ನು ಕೈಗೊಳ್ಳುವರೇ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಸ್ವಾಮಿ, ಪ್ರಪಂಚದಲ್ಲಿಯೇ ಉತ್ತಮವಾದಂಥ ಯಾತ್ರಾಸ್ಥಳ ಬಿಜಾಪುರ ಜಿಲ್ಲೆ ಆಗಿದೆ. ಆ ಜಿಲ್ಲೆಯಲ್ಲಿ ನಾನು 4 ದಿನಗಳ ಹಿಂದೆ ಪ್ರವಾಸ ಕೈಗೊಂಡಾಗ ನಾನು ಹಲವಾರು ಪ್ರದೇಶಗಳನ್ನು ನೋಡಿದೆ. ಶ್ರೀಮಾನ್ ಕಟಪಟ್ಟಿಯವರೂ ಸಹ ಇದರ ಬಗ್ಗೆ ಹೇಳಿದರು. ಇವೊತ್ತಿನ ದಿವಸ ಬಾದಾಮಿಯಲ್ಲಿ ಟೂರಿಸ್ಟ್ ಹೋಟಲ್ ಆಗಬೇಕು. 10 ಕೊಠಡಿಗಳನ್ನು ಕಟ್ಟಬೇಕು. ಅದರ ಸ್ಥಳ ಪರಿಶೀಲನೆಗೆ ಹೋಗಿದ್ದೆ. ಅಲ್ಲಿ ಇದಕ್ಕಾಗಿ 10 ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದೇವೆ. ಅದು ಬಹಳ ಉತ್ತಮವಾದಂಥ ಸ್ಥಳ. ಅಲ್ಲಿ ಟೂರಿಸ್ಟ್ ಕಾಟೇಜಸ್ ಆಗುವುದರ ಜೊತೆಗೆ ಆ ಬಾದಾಮಿಯಲ್ಲಿ ಅಗಸ್ತೇಶ್ವರನ ಒಂದು ಕೊಳ ಇದೆ. ಅಲ್ಲಿ ಬೋಟಿಂಗ್ ಮಾಡುವಂಥಾ ಒಂದು ಕಾರ್ಯಕ್ರಮವನ್ನೂ ಸಹ ಹಾಕಿಕೊಂಡಿದ್ದೇವೆ. ಅದೇ ರೀತಿ ಬಿಜಾಪುರದಲ್ಲೂ ಸಹ ಒಂದು ಹೊಟೇಲ್ ಟೂರಿಸ್ಟ್ ಕಟ್ಟಬೇಕಾಗಿದೆ. ಇದರ ಜೊತೆಗೆ ಐಹೊಳೆ ಮತ್ತು ಮಹಾಕೂಟವನ್ನೂ ಸಹ ಒಂದು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದಕ್ಕೆ ಮೂರು ಸ್ಥಳಗಳನ್ನು ಪರಿಶೀಲನೆ ಮಾಡಿಕೊಂಡು ಬಂದಿದ್ದೇನೆ. ನಾನು ಮೊದಲೇ ಹೇಳಿದ ಹಾಗೆ ಬಿಜಾಪುರ ಜಿಲ್ಲೆಯನ್ನು ಒಂದು ಉತ್ತಮವಾದ ಪ್ರವಾಸೀ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇನೆಂದು ಹೇಳಬಯಸುತ್ತೇನೆ. ಇದರ ಜೊತೆಗೆ ಅಲ್ಲಿಗೆ ಎರಡು ಬಸ್ಸುಗಳನ್ನೂ ಸಹ ಹಾಕಬೇಕೆಂದಿದ್ದೇವೆ. ಇದರಲ್ಲಿ ಬೆಂಗಳೂರಿನಿಂದ ಒಂದು ಇನ್ನೊಂದು ಬಸ್ ಬಿಜಾಪುರಕ್ಕೆ ಬಂದಂಥಾ ಯಾತ್ರಾರ್ಥಿಗಳನ್ನು ಅಲ್ಲಿ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋಗುವುದಕ್ಕೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ಕೆಲಸವನ್ನು ಆದಷ್ಟು ಶೀಘ್ರವಾಗಿ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರು ಬಿಜಾಪುರದಲ್ಲಿ ವಿಮಾನ ನಿಲ್ದಾಣದ ಬಗ್ಗೆ ಹೇಳಿದ್ದಾರೆ. ಈ ವಿಮಾನ ನಿಲ್ದಾಣದ ಬಗ್ಗೆ ಕೇಂದ್ರದ ಜೊತೆಗೆ ಸಂಪರ್ಕ ಮಾಡುತ್ತೇನೆ. ಬಿಜಾಪುರಕ್ಕೆ ಒಂದು ವಿಮಾನ ನಿಲ್ದಾಣ ಆಗಬೇಕು ಎನ್ನುವುದರ ಬಗ್ಗೆ ನಾನೂ ಒಬ್ಬ. ಈ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡುತ್ತೇನೆಂದು ಅಷ್ಟು ಮಾತ್ರ ಹೇಳುತ್ತೇನೆ.

ವಿಷಯ : ಅರಸೀಕೆರೆಯಲ್ಲಿರುವ ಕಾರ್ಬನ್ ಕಾರ್ಖಾನೆಯಲ್ಲಿ ಸರ್ಕಾರದವರು ಬಂಡವಾಳವನ್ನು ಹೂಡಿರುವ ಬಗ್ಗೆ.

ಪ್ರ. ಸಂಖ್ಯೆ 721 (1727) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಅರಸೀಕೆರೆಯಲ್ಲಿ 'ಕಾರ್ಬನ್' ಕಾರ್ಖಾನೆಯಲ್ಲಿ ಸರ್ಕಾರದವರು ಹೂಡಿರುವ ಬಂಡವಾಳವೆಷ್ಟು ; ಹಾಗೂ 1983ನೇ ಸಾಲಿನಲ್ಲಿ ಸದರಿ ಕಾರ್ಖಾನೆಯವರು ಗಳಿಸಿದ ಲಾಭವೆಷ್ಟು ;

ಆ) ಕಾರ್ಖಾನೆಯ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು ; ಹಾಗೂ ಆ ಪೈಕಿ ತಾತ್ಕಾಲಿಕ ಕಾರ್ಮಿಕರ ಸಂಖ್ಯೆ ಎಷ್ಟು ;

ಇ) ಕಾರ್ಖಾನೆಯ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಾಗ ನಿಯಮಗಳನ್ನು ಪಾಲಿಸಲಾಗಿದೆಯೆ ;